C) No.

D) As and when the doctors returns from Post-Graduate studies and the Karnataka Public Service Commission which has been requested to select 150 male doctors sends the list of selected candidates.

ದಕ್ಷಿಣ ಕನ್ನಡ ಜಿಲ್ಲೆಯಂ ಮೀನುಗಾರರಿಗೆ ಪರ್ಸಿನ್ ದೋಣಿಗಾಗಿ ನೀಡಲಾಗುತ್ತಿದ್ದ ಅನುಧಾನವನ್ನು ನಿಲ್ಲಿಸಿರುವ ಬಗ್ಗೆ

೭೧೮ ಶ್ರೀ ಬಿ. ಎ. ಉಮರಬ್ಬ (ವಿಟ್ಲ).—ಮಾನ್ಯ ಮೀನುಗಾರಿಕೆ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರಿಗೆ ಪರ್ಸಿನ್ ದೋಣಿಗಾಗಿ ನೀಡಲಾಗುತ್ತಿದ್ದ ಅನುಧಾನವನ್ನು ನಿಲ್ಲಿಸಲಾಗಿದೆಯೆ ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣವೇನು ?

ಇ) ಈಗಾಗಲೇ ಅರ್ಜಿ ಸಲ್ಲಿಸಿ, ಎಲ್ಲಾ ವಿಧಿವಿಧಾನಗಳನ್ನು ಪೂರ್ಣಗೊಳಿಸಿರುವವರ ಅರ್ಜಿಗಳನ್ನಾದರೂ ಅಂಗೀಕಾರ ಮಾಡಲು ಕ್ರಮ ಕೈಗೊಳ್ಳುವರೇ ?

ಶ್ರೀ ಸಿ. ಬೈರೇಗೌಡ (ಮೀನುಗಾರಿಕೆ ಹಾಗೂ ಬಂದರು ಖಾತೆ ಸಚಿವರು).—

ಅ) ಹೌದು

ಆ) ದಕ್ಷಿಣ ಕನ್ನಡ ಜಿಲ್ಲೆಯಂ ಕರಾವಳಿಯಲ್ಲಿ ಪರ್ಸಿನ್ ದೋಣಿಗಳು ಹೆಚ್ಚಿ ಕೇಂದ್ರೀಕೃತವಾಗಿರುವುದರಿಂದ ಪ್ರತಿ ಪರ್ಸಿನ್ ಬೋಟಿನ ಇಳುವರಿ ಕಡಿಮೆಯಾಗಿದೆ. ಆದಂದರಿಂದ ಪರ್ಸಿನ್ ಮೇಲೆ ಕೊಡುತ್ತಿದ್ದ ಸಹಾಯ ಧನವನ್ನು ೧-೬-೮೧ ರಿಂದ ನಿಲ್ಲಿಸಲಾಗಿದೆ. ಆದರೆ ವಿಶೇಷ ಘಟಕ ಯೋಜನೆಯಲ್ಲಿ ಪರಿಶಿಷ್ಟ ಜಾತಿ ಮೀನುಗಾರರಿಗೆ ಸಹಾಯ ಧನವನ್ನು ಮುಂದುವರಿಸಲಾಗಿದೆ.

ಇ) ಎರಡು ಆರ್ಜಿಗಳು ಕಾಲ ವಿಳಂಬವಾಗಿ ಸಲ್ಲಿಸಿದ್ದರಿಂದ ತಿರಸ್ಕರಿಸಲಾಗಿದ್ದವು ಇವುಗಳನ್ನು ಮರುಪರೀಶಿಲಿಸಲಾಗುವುದು.

ಕುಂದಾಪುರ ಕ್ಷೇತ್ರದ ಕೋಡಿ ಪ್ರಾಥಮಿಕ ಆರೋಗ್ಯ ಘಟಕದ ಸಿಬ್ಬಂದಿ ವರ್ಗದ ಬಗ್ಗೆ

೭೭೮ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಂದಾಪುರ ಕ್ಷೇತ್ರದ ಕೋಡಿ ಪ್ರಾಥಮಿಕ ಆರೋಗ್ಯ ಘಟಕ ಮಂಜೂರಾದ ಸಿಬ್ಬಂದಿ ವರ್ಗದ ಸಂಖ್ಯೆ ಬಲವೆಷ್ಟು ?

ಆ) ಕೋಡಿ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಕೊರತೆಯಿರುವ ವಿವಿಧ ದರ್ಜೆಯ ಸಿಬ್ಬಂದಿಗಳ ಸಂಖ್ಯೆ ಎಷ್ಟು ?

ಇ) ಈ ಕೊರತೆಯನ್ನು ಎಂದಂ ನೀಗಿಸಲಾಗುವುದು ?